ಶ್ರೀ ಡಿ. ಎ. ಚಿನ್ನಪ್ಪ.—ಉತ್ತರ ಕನ್ನಡ, ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅರಣ್ಯ ಹೆಚ್ಚು ಇದ್ದು, ಸೌದೆ ಸಂಗ್ರಹಿಸುವ ಖರ್ಚು ಕಡಿಮೆ ಇದೆ ಎಂಬುದಾಗಿ ತಿಳಿಸಿದ್ದಾರೆ. ಎಲ್ಲ ಕಡೆ ಒಂದೇ ಬೆಲೆ ಇರುವುದರಿಂದ, ಕಡಿಮೆ ಇರುವ ಪ್ರಶ್ನೆ ಎಲ್ಲಿ ಬಂತು ? ಅದರ ಡಿಸ್ಟ್ರಿಬ್ಯೂಷನ್ ಚಾರ್ಜಸ್ ಕೂಡ ಒಂದೇ ಆಗಿರುವುದರಿಂದ ಎಷ್ಟೋ ವರ್ಷಗಳಿಂದ ೧೫೦ ರೂ.ಗಳು ಇದ್ದುದನ್ನು ಈಗ ೫೧೦ ರೂ. ಗಳಿಗೆ ಹೆಚ್ಚು ಮಾಡಿರುವುದರಿಂದ ಬಹಳ ತೊಂದರೆಯಾಗಿದೆ. ಇದನ್ನು ಕಡಿಮೆ ಮಾಡಬೇಕಾಗುತ್ತದೆ. ಟನ್ ಸೌದೆ ಬೆಲೆ ೫೧೦ ರೂ.ಗಳೆಂದು ಮಾಡಿರುವುದರಿಂದ ಬಡವರು ಯಾರೂ ಸೌದೆಯನ್ನು ಕೊಂಡು ಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಬಡವರಿಗೆ ಸೌದೆಯನ್ನು ಕೊಡುವ ಪ್ರಯತ್ನ ಮಾಡುವುದಾದರೆ, ಅದರ ಬೆಲೆಯನ್ನು ಇಳಿಸಲೇಬೇಕು. ಮತ್ತೆ ಬಡಜನರಿಗೆ ಕೊಡತಕ್ಕ ಸೌದೆಯಲ್ಲಿ ಗ್ರೀನ್‌ಕಾರ್ಡ್ ದಾರರು ಯಾರ್ಯಾರು ಇದ್ದಾರೆ, ಅವರಿಗೆ ರಿಯಾಯಿತಿ ಬೆಲೆಯಲ್ಲಿ ಸೌದೆಯನ್ನು ಸರಬರಾಜು ಮಾಡ ಬೇಕಾಗುತ್ತದೆ. ಕೊಡಗು, ದಕ್ಷಿಣ ಕನ್ನಡ ಹಾಗೂ ಇತರೆ ಅರಣ್ಯಗಳಲ್ಲಿ ಮರ ಬಿದ್ದು ಹೋಗಿರುತ್ತವೆ. ಅದನ್ನು ಸಂಗ್ರಹಣೆ ಮಾಡುತ್ತಿಲ್ಲ. ಇದರಿಂದ ಕೂಡ ನಷ್ಟವಾಗುತ್ತಿದೆ. ಈ ರೀತಿಯ ಮರಗಳನ್ನು ಸಂಗ್ರಹಣೆ ಮಾಡಿ ಸೌದೆಯ ಬೆಲೆಯನ್ನು ಕಡಿಮೆ ಮಾಡಬೇಕು. ಇದರಿಂದ ಕೊಡಗಿನಿಂದ ಸೌತ್‌ಕೆನರ ಜಿಲ್ಲೆಗೆ ಪರ್ಮಾವಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕೊಟ್ಟಿರುತಕ್ಕ ಸಲಹೆಗಳ ಬಗ್ಗೆ ತೀವ್ರವಾಗಿ ಗಮನ ಹರಿಸುತ್ತೇನೆ. ಅದನ್ನು ಪರಿಶೀಲನೆ ಮಾಡಿ, ಏನು ಪುನರ್ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತೇನೆ.

ಕಲಘಟಗಿ ತಾಲ್ಲೂಕಿಗೆ ಸರ್ಕಾರಿ ಪ್ರೌಢಶಾಲೆಗಳು

೫೬೧. ಶ್ರೀ ಪಿ. ಸಿ. ಸಿದ್ದನಗೌಡ್ರ (ಕಲಘಟಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ತಾಲ್ಲೂಕಿನಲ್ಲಿರುವ ಸಂಗಮೇಶ್ವರ ಸೂರಶಟ್ಟಿ ಕೊಪ್ಪದ ಗ್ರಾಮಂಗಳಿಗೆ ಸರ್ಕಾರಿ ಪ್ರೌಢಶಾಲೆಯೊಂದನ್ನು ಮಂಜೂರ್ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಇ) ಕಲಘಟಗಿ ತಾಲ್ಲೂಕಿನ ಭವಿಷ್ಯಗಟ್ಟಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪ್ರೌಢಶಾಲೆ ಮಂಜೂರ್ಮಾಡಲಾಗಿದೆಯೇ ?

ಈ) ಹಾಗಿದ್ದಲ್ಲಿ ಈ ವಿಷಯ ಯಾವ ಹಂತದಲ್ಲಿದೆ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲಾ.

ಆ) (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದ (ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲಾ.

(ಈ) (ಇ) ಪ್ರಶ್ನೆಗೆ ನೀಡಿರುವ ಉತ್ತರದಿಂದ (ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡ.—ಈ ಹಿಂದೆ ಇದೇ ವಿಚಾರದಲ್ಲಿ ನಾನೊಂದು ಪ್ರಶ್ನೆಯನ್ನು ಕೇಳಿದ್ದಾಗ ಪರಿಶೀಲಿಸುತ್ತೇವೆಂದು ಸರ್ಕಾರದವರು ಹೇಳಿದ್ದರು, ಈ ಸಲ ಅದೇ ಪ್ರಶ್ನೆಯನ್ನು ಕೇಳಿದಾಗ ಅದು ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ನನ್ನ ವಿನಂತಿ ಏನೆಂದರೆ ಆ ತಾಲ್ಲೂಕಿನಲ್ಲಿರ ತಕ್ಕದ್ದು ಕೇವಲ ಒಂದೇ ಒಂದು ಹೈಸ್ಕೂಲು. ಅದು ಅತ್ಯಂತ ಹಿಂದುಳಿದಿರತಕ್ಕ ಪ್ರದೇಶವಾಗಿದೆ. ಪರಿಶಿಷ್ಟ ಜಾತಿ ಜನಾಂಗದವರು ಹೆಚ್ಚು ಜನ ಇದ್ದು, ಶಾಲೆಯನ್ನು ಮಂಜೂರು ಮಾಡಬೇಕು ಆ ಜನರು ಸರ್ಕಾರಕ್ಕೆ ಶಾಲೆಯನ್ನು ಮಂಜೂರು ಮಾಡಿಸಿಕೊಳ್ಳುವ ಸಲುವಾಗಿ ಒಂದು ಸಾವಿರ ರೂಪಾಯಿ ಗಳನ್ನೂ ಕೂಡ ಸರ್ಕಾರಕ್ಕೆ ತುಂಬಿದ್ದಾರೆ. ಆದರೂ ಇದುವರೆಗೂ ಯಾವುದೇ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿಲ್ಲ. ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುವುದೇನೆಂದರೆ ಇದರ ಬಗ್ಗೆ ಅವರು ಯಾವಾಗ ನಿರ್ಣಯ ತೆಗೆದುಕೊಳ್ಳುತ್ತಾರೆ ?

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಈ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಈಗ ನೇರವಾಗಿ ನಾವು ಪರಿಶೀಲನೆ ಮಾಡುವುದರ ಬದಲು

ಆಯಾಯ ಜಿಲ್ಲಾಪರಿಷತ್ತಿನವರಿಂ ಅವುಗಳ ಅವಶ್ಯಕತೆ ಬಗ್ಗೆ ಮತ್ತು ಮಿಕ್ಕ ನಿಯಮಗಳನ್ನು ಪಾಲನೆ ಮಾಡುವುದರ ಬಗ್ಗೆ ಶಿಫಾರಸ್ಸು ಮಾಡಿದ್ದಲ್ಲಿ ಸರ್ಕಾರಕ್ಕೆ ಅವುಗಳನ್ನು ಪರಿಶೀಲಿಸಿ ಮಂಜೂರಾತಿ ಮಾಡಬಹುದು. ಆದ್ದರಿಂದ ಜಿಲ್ಲಾಪರಿಷತ್ತಿನಲ್ಲಿ ಈ ಒಂದು ವಿಚಾರವನ್ನು ಆಲ್ಲಿ ಚರ್ಚೆ ಮಾಡಿ ಅಲ್ಲಿಂದ ಸರ್ಕಾರಕ್ಕೆ ಒಂದು ಶಿಫಾರಸ್ಸು ಬಂದ ಮೇಲೆ ನಾವು ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡ.—ಜಿಲ್ಲಾಪರಿಷತ್ತಿನವರು ಸರ್ಕಾರಕ್ಕೆ.....

ಅಧ್ಯಕ್ಷರಂ.—ಇಲ್ಲ ಆಗುವುದಿಲ್ಲ ನೀವು ಕುಳಿತುಕೊಳ್ಳಿ ಒಬ್ಬರಿಗೆ ಒಂದು ಸಲ ಪೂರಕ ಪ್ರಶ್ನೆ ಕೇಳಲು ಅವಕಾಶವನ್ನು ಕೊಟ್ಟಿದ್ದೇನೆ.

ಹಸಿರು ಕಾರ್ಡ್ ಹೊಂದಿದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ

೩೭೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಲೇಜು ಶಿಕ್ಷಣದ ವಿದ್ಯಾರ್ಥಿಗಳಲ್ಲಿ ಹಸಿರು ಕಾರ್ಡು ಹೊಂದಿದವರಿಗೆ ಮಾತ್ರ ಫೀ ವಿನಾಯಿತಿ ಕೊಡುವುದಕ್ಕೆ ಕಾರಣವೇನು ?

ಆ) ಪಟ್ಟಣ ಪ್ರದೇಶಗಳಲ್ಲಿ ಹಸಿರು ಕಾರ್ಡು ವಿತರಣೆ ಮಾಡದೆ ಇರುವಾಗ ಪಟ್ಟಣ ಪ್ರದೇಶದ ವಿದ್ಯಾರ್ಥಿಗಳ ಫೀ ವಿನಾಯಿತಿ ರದ್ದು ಮಾಡಿರುವುದು ಸರಿಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯು ಹೊರಡಿಸಿರುವ ಆದೇಶದನ್ವಯ ರೂ. ೩೬೦–೦೦ ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿದ, ಗ್ರಾಮೀಣ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ.

ಆ) ಮೇಲೆ ಹೇಳಿದ ಆದೇಶದನ್ವಯ, ಈ ಸೌಲಭ್ಯವನ್ನು ಪಟ್ಟಣ ಪ್ರದೇಶದ ವಿದ್ಯಾರ್ಥಿಗಳಿಗೂ ಸಹ ವಿಸ್ತರಿಸಲಾಗಿದೆ. ಗ್ರಾಮೀಣ ಹಾಗೂ ನಗರ ಪ್ರದೇಸಗಳಲ್ಲಿ ಹಸಿರು ಕಾರ್ಡುಗಳನ್ನು ಮಾತ್ರ ಪೋಷಕರ ಆದಾಯದ ಆಧಾರವನ್ನಾಗಿ ಇಟ್ಟುಕೊಳ್ಳಬಾರದೆಂಬ ಅಂಶವನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈಗ ಹೊಸ ಆದೇಶದ ಪ್ರಕಾರ ಹಳ್ಳಿಗಾಡು ಪ್ರದೇಶಗಳಲ್ಲಿ ಏನು ಸವಲತ್ತು ಕೊಡುತ್ತಿದ್ದಾರೆ ಎಂದರೆ ಹಸಿರು ಕಾರ್ಡು ಇದ್ದವರಿಗೆ ಮಾತ್ರ ಕೊಡುತ್ತಿದ್ದಾರೆ. ಮೊದಲಿನ ಆದೇಶದ ಪ್ರಕಾರ ನಡೆಯುತ್ತಿಲ್ಲ. ಹಸಿರು ಕಾರ್ಡ್‌ಗಳನ್ನು ಯಾರಿಗೆ ಕೊಟ್ಟಿದ್ದೀರಿ, ಅವರು ಉಳ್ಳವರು ಶಿವಾಲಯ ಮಾಡುವವರು ಇದ್ದಾರೆ. ಅದಕ್ಕೋಸ್ಕರ ಮೊದಲು ಇದ್ದ ಹಾಗೆ ಯಾರು ನಿಜವಾಗಿ ೩೬೦೦ ರೂ. ಗಳಿಗಿಂತ ಕಡಿಮೆ ಆದಾಯದವರು ಇದ್ದಾರೆ ಅವರಿಗೆ ಪಟ್ಟಣ ಪ್ರದೇಶಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಈ ಕಾರ್ಯಕ್ರಮ ನಡೆಸಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಇದು ಸಮಾಜಕಲ್ಯಾಣ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ಈಗ ಸಮಾಜ ಕಲ್ಯಾಣ ಇಲಾಖೆಯ ಜೊತೆಯಲ್ಲಿ ನಾವು ಕೂಡ ಸಂಪರ್ಕಿಸಿ ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳಿದ ಹಾಗೆ ಈ ಹಸಿರು ಕಾರ್ಡು ಅಲ್ಲದೇನೆ ಬೇರೆ ಮೂಲಕವಾಗಿ ಯಾವ ಆರ್ಥಿಕ ಮಟ್ಟ ೩೬೦೦ ರೂಪಾಯಿಗಿಂತ ಕಡಿಮೆ ಇದೆ ಅವರಿಗೂ ಕೂಡ ಶುಲ್ಕ ವಿನಾಯ್ತಿ ಕೊಡಬೇಕೆಂದು ಸರ್ಕಾರದ ವಿಚಾರದಲ್ಲಿದೆ. ಆದರೆ ಇದು ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಆಗಬೇಕಾಗಿರುವುದರಿಂದ ಆ ತರಹ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇದು ಬಹಳ ಮಹತ್ವದ ಪ್ರಶ್ನೆ ಇದೆ. ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ, ಒಬ್ಬರಿಗೆ ಒಂದೇ ಅವಕಾಶ ಎಂದು ನಾನು ಹೇಳಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇದನ್ನು ಕೊನೆ ಪ್ರಶ್ನೆಯಾಗಿ ಇಟ್ಟಿದ್ದೀರಿ. ನಾನೇನು ಮಾಡುವುದಕ್ಕೆ ಆಗುತ್ತದೆ ? ಅವರು ಉತ್ತರವನ್ನು ಸರಿಯಾಗಿ ಹೇಳಿಲ್ಲ.

ಅಧ್ಯಕ್ಷರು.—ನೀವು ಹೀಗೆ ಮಾಡಿದರೆ ಪ್ರಶ್ನೆಯನ್ನು ಲ್ಯಾಪ್ಸ್ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ.